# (As on 31-03-2023)

**ಅಧಿಕಾರಿಗಳು ಮತ್ತು ಕರ್ತವ್ಯಗಳು [ಸೆಕ್ಷನ್ 4(1) (ಬಿ)],**
**ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ**
**ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ**
**[ಸೆಕ್ಷನ್ 4(1) (ಬಿ)]**

**ಮಂಡಳಿ ಕಾರ್ಯದರ್ಶಿ ಇಲಾಖೆ:**




ಈ ಇಲಾಖೆಯ ಮುಖ್ಯಸ್ಥರಾಗಿ ಮಂಡಳಿ ಕಾರ್ಯದರ್ಶಿಗಳು ಕಾರ್ಯ ನಿರ್ವಹಿಸುತ್ತಾರೆ. ಇವರ ಕಾರ್ಯ ವ್ಯಾಪ್ತಿಯು ನಿರ್ದೇಶಕರು(ಸಿ–ಪ)ರವರ ಮೂಲಕ ವ್ಯವಸ್ಥಾಪಕ ನಿರ್ದೇಶಕರವರ ಅಧೀನಕ್ಕೆ ಒಳಪಟ್ಟಿದೆ. ಇವರು ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಇತರೆ ನಿರ್ದೇಶಕರುಗಳ ನಡುವೆ ಸಂಯೋಜನಾಧಿಕಾರಿಗಳಾಗಿ ಇವರಿಗೆ ದತ್ತವಾದ ಅಧಿಕಾರಗಳ ಮತ್ತು ಜವಾಬ್ದಾರಿಗಳನ್ವಯ ಕಾರ್ಯ ನಿರ್ವಹಿಸುತ್ತಾರೆ.

ಅ) ನಿಗಮದ ಮಂಡಳಿಯ ಕಾರ್ಯಚಟುವಟಿಕೆಗಳು

1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡಳಿಯ ಸಭೆಗಳನ್ನು ನಡೆಸುವುದು.
2) ಮಂಡಳಿ ಸಭೆಯ ತೀರ್ಮಾನಗಳ ಕುರಿತು ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸುವುದು ಹಾಗೂ ತೀರ್ಮಾನಗಳ ಅನುಷ್ಠಾನದ ಕುರಿತು ಮಂಡಳಿಗೆ ಮಾಹಿತಿಯನ್ನು ಒದಗಿಸುವುದು.
3) ಮಂಡಳಿಯ ನಿರ್ದೇಶಕರುಗಳ ನೇಮಕಾತಿ ಕುರಿತು ಹಾಗೂ ಮಂಡಳಿಯ ವಿಷಯಗಳ ಕುರಿತು ಸರ್ಕಾರದೊಂದಿಗೆ ವ್ಯವಹರಿಸುವುದು.

ಆ) ಕೇಂದ್ರ ಕಛೇರಿಯಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಅರ್ಜಿಗಳ ಸ್ವೀಕೃತಿ, ಅರ್ಜಿಗಳ ನೋಂದಣಿ, ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಕಳುಹಿಸುವ ಕೆಲಸಗಳ ಮೇಲ್ವಿಚಾರಣೆ ನಡೆಸುವುದು. ಕೇಂದ್ರ ಕಛೇರಿಯಲ್ಲಿ ಸಾಮಾನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಮತ್ತು ಕಾರ್ಯದರ್ಶಿ ಶಾಖೆಯ ವ್ಯಾಪ್ತಿಯ ಅರ್ಜಿಗಳಿಗೆ ಸಂಬಂಧಪಟ್ಟಂತೆ ಮೊದಲನೇ ಮೇಲ್ಮನವಿ ಪ್ರಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವುದು.

ಇ) ಮಾಹಿತಿ ಆಯೋಗದಿಂದ ಸ್ವೀಕರಿಸಲಾಗುವ ವಿಚಾರಣಾ ನೋಟೀಸ್‌ಗಳಿಗೆ ಸಂಬಂಧಿಸಿದಂತೆ ಪ್ರಕರಣಗಳ ಮೇಲ್ವಿಚಾರಣೆ.

## ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ವ್ಯವಸ್ಥೆಯ ವಿವರಗಳು

ರಸ್ತೆ ಸಾರಿಗೆ ಸಂಸ್ಥೆ ಕಾಯಿದೆ 1950 ರ ಸೆಕ್ಷನ್ 5(2) ರ ಅನುಸಾರ ನಿಗಮದ ಮಂಡಳಿಯಲ್ಲಿ ಅಧ್ಯಕ್ಷರು ಮತ್ತು ಇತರೆ ನಿರ್ದೇಶಕರುಗಳನ್ನು ಒಳಗೊಂಡಂತೆ ಒಟ್ಟು 5ಕ್ಕೆ ಕಡಿಮೆ ಇಲ್ಲದಂತೆ ಮತ್ತು 17ಕ್ಕೆ ಹೆಚ್ಚಿಗೆ ಇಲ್ಲದಂತೆ ರಾಜ್ಯ ಸರ್ಕಾರವು ನೇಮಕ ಮಾಡುತ್ತಿದೆ. ರಾಜ್ಯ ಸರ್ಕಾರವು ಅಧಿಕಾರೇತರ ನಿರ್ದೇಶಕರುಗಳನ್ನು (non-Official Directors) ಸಹ ನಿಗಮದ ಮಂಡಳಿಗೆ ನೇಮಕ ಮಾಡುತ್ತಿದೆ.

ರಸ್ತೆ ಸಾರಿಗೆ ಸಂಸ್ಥೆ ಕಾಯಿದೆ 1950 ರ ಸೆಕ್ಷನ್ 17 ರ ಅನುಸಾರ ಕರಾರಸಾಸಂಸ್ಥೆ ನಿಯಮಗಳು 1961ರ ನಿಯಮ 20 ಹಾಗೂ 21 ರಡಿ ವಿಭಾಗೀಯ ಸಲಹಾ ಸಮಿತಿಗಳನ್ನು ರಾಜ್ಯ ಸರ್ಕಾರವು ರಚಿಸಬಹುದಾಗಿದ್ದು, ಈ ಸಮಿತಿಗೆ ಸದಸ್ಯರುಗಳನ್ನು ರಾಜ್ಯ ಸರ್ಕಾರವು ನೇಮಕ ಮಾಡುತ್ತದೆ.

## ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರ ನಿಕಾಯಗಳು

ರಸ್ತೆ ಸಾರಿಗೆ ಸಂಸ್ಥೆ ಕಾಯ್ದೆ 1950 ರ ಪರಿಚ್ಛೇದ 5(2) ರ ಅನುಸಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮಂಡಳಿಯಲ್ಲಿ ಅಧ್ಯಕ್ಷರು ಮತ್ತು ಇತರೆ ನಿರ್ದೇಶಕರುಗಳನ್ನು ಒಳಗೊಂಡಂತೆ ಒಟ್ಟು 5ಕ್ಕೆ ಕಡಿಮೆ ಇಲ್ಲದಂತೆ ಮತ್ತು 17 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ರಾಜ್ಯ ಸರ್ಕಾರವು ನೇಮಕ ಮಾಡುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ನೇಮಿಸಲ್ಪಡುವ ಅಧಿಕಾರಿ ನಿರ್ದೇಶಕರುಗಳು ಕ್ರಮವಾಗಿ 7.5 : 1 ರ ಅನುಪಾತದಲ್ಲಿರಬೇಕಿರುತ್ತದೆ. ಅಧಿಕಾರೇತರ ನಿರ್ದೇಶಕರು part-time ನಿರ್ದೇಶಕರಾಗಿರುತ್ತಾರೆ. ಆದರೆ, ಅಧಿಕಾರೇತರ ನಿರ್ದೇಶಕರು ಅಧ್ಯಕ್ಷರಾಗಿ ನೇಮಕಗೊಂಡಲ್ಲಿ ಅವರು whole-time ನಿರ್ದೇಶಕರಾಗಿರುತ್ತಾರೆ. ಸರ್ಕಾರವು ಒಬ್ಬರು ಅಥವಾ ಅದಕ್ಕಿಂತ ಹೆಚ್ಚು ತನ್ನ ಪ್ರತಿನಿಧಿಗಳನ್ನು whole-time ನಿರ್ದೇಶಕರನ್ನಾಗಿ ನೇಮಿಸಬಹುದಾಗಿರುತ್ತದೆ.

ಅಧಿಕಾರೇತರ ನಿರ್ದೇಶಕರು ಸರ್ಕಾರವು ಇಚ್ಛಿಸುವ ಅವಧಿವರೆಗೆ ಮಂಡಳಿಯ ನಿರ್ದೇಶಕರಾಗಿರುತ್ತಾರೆ. ಅಧಿಕಾರಿ ನಿರ್ದೇಶಕರು ಸರ್ಕಾರವು ಇಚ್ಛಿಸುವವರೆಗೆ ಅಥವಾ ಅವರ ನೇಮಕದ ಆದೇಶದಲ್ಲಿ ತಿಳಿಸಿದ ಹುದ್ದೆಯ ಅವಧಿಯವರೆಗೆ ಮಂಡಳಿಯ ನಿರ್ದೇಶಕರಾಗಿರುತ್ತಾರೆ.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ**
**ಮಂಡಳಿ ನಿರ್ದೇಶಕರುಗಳು**

**(ದಿನಾಂಕ: 31.03.2023)**

| ಕ್ರಮ ಸಂಖ್ಯೆ | ಹೆಸರುಗಳು/ ವಿಳಾಸ | ಅಧಿಕಾರಿ/ ಅಧಿಕಾರೇತರ |
|---|---|---|
| 1 | **ಶ್ರೀ ಎಂ. ಚಂದ್ರಪ್ಪ,**<br>ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು,<br>ಕರಾರಸಾ.ನಿಗಮ, ಕೇಂದ್ರ ಕಛೇರಿ,<br>ಬೆಂಗಳೂರು–560027. | ಸನ್ಮಾನ್ಯ ಅಧ್ಯಕ್ಷರು |
| 2 | **ಶ್ರೀ ಮೋಹನ್ ಬಿ ಮೆಣಸಿನಕಾಯಿ**<br>ಸನ್ಮಾನ್ಯ ಉಪಾಧ್ಯಕ್ಷರು,<br>ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ,<br>ಬೆಂಗಳೂರು–560027. | ಸನ್ಮಾನ್ಯ ಉಪಾಧ್ಯಕ್ಷರು |

| | | |
|---|---|---|
| 3 | **ಡಾ. ಏಕ್ ರೂಪ ಕೌರ್ , ಭಾಆಸೇ.,**<br>ಸರ್ಕಾರದ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನ ಸೌಧ, ಬೆಂಗಳೂರು–560001. | ನಿರ್ದೇಶಕರು<br>(ಅಧಿಕಾರಿಯುತ) |
| 4 | **ಡಾ. ಎನ್.ವಿ. ಪ್ರಸಾದ್, ಭಾಆಸೇ.,**<br>ಸರ್ಕಾರದ ಕಾರ್ಯದರ್ಶಿಗಳು,<br>ಕರ್ನಾಟಕ ಸರ್ಕಾರ, ಸಾರಿಗೆ ಇಲಾಖೆ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು 560001 | ನಿರ್ದೇಶಕರು<br>(ಅಧಿಕಾರಿಯುತ) |
| 5 | **ಶ್ರೀ ವಿ. ಅನ್ಬುಕುಮಾರ್ ಭಾಆಸೇ.,**<br>ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ.ನಿಗಮ,<br>ಕೇಂದ್ರ ಕಛೇರಿ, ಬೆಂಗಳೂರು–560027. | ನಿರ್ದೇಶಕರು<br>(ಅಧಿಕಾರಿಯುತ) |
| 6 | **ಶ್ರೀಮತಿ ಸತ್ಯವತಿ ಜಿ. ಭಾ.ಆ.ಸೇ.,**<br>ವ್ಯವಸ್ಥಾಪಕ ನಿರ್ದೇಶಕರು,<br>ಬೆಂ.ಮ.ಸಾ.ಸಂಸ್ಥೆ, ಕೇಂದ್ರ ಕಛೇರಿ,<br>ಬೆಂಗಳೂರು 560 027 | ನಿರ್ದೇಶಕರು<br>(ಅಧಿಕಾರಿಯುತ) |
| 7 | **ಶ್ರೀ ಭರತ್ ಎಸ್, ಭಾಆಸೇ.,**<br>ವ್ಯವಸ್ಥಾಪಕ ನಿರ್ದೇಶಕರು,<br>ವಾಕರಸಾಸಂಸ್ಥೆ., ಕೇಂದ್ರ ಕಛೇರಿ,<br>ಹುಬ್ಬಳ್ಳಿ. | ನಿರ್ದೇಶಕರು<br>(ಅಧಿಕಾರಿಯುತ) |
| 8 | **ಶ್ರೀ ಎಂ. ರಾಚಪ್ಪ, ಕಆಸೇ., (ಆಯ್ಕೆ ಶ್ರೇಣಿ)**<br>ವ್ಯವಸ್ಥಾಪಕ ನಿರ್ದೇಶಕರು,<br>ಕಕರಸಾಸಂಸ್ಥೆ., ಕೇಂದ್ರ ಕಛೇರಿ,<br>ಕಲಬುರ್ಗಿ | ನಿರ್ದೇಶಕರು<br>(ಅಧಿಕಾರಿಯುತ) |
| 09 | **ಶ್ರೀ ಪ್ರಶಾಂತ್ ಕುಮಾರ್ ಮಿಶ್ರ ಭಾಆಸೇ.,**<br>ನಿರ್ದೇಶಕರು (ಸಿಬ್ಬಂದಿ ಮತ್ತು ಜಾಗೃತ),<br>ಕರಾರಸಾನಿಗಮ. ಕೇಂದ್ರ ಕಛೇರಿ,<br>ಬೆಂಗಳೂರು 560027. | ನಿರ್ದೇಶಕರು<br>(ಅಧಿಕಾರಿಯುತ) |
| 10 | **ಶ್ರೀ ಪರೇಶ್ ಕುಮಾರ್ ಗೋಯಲ್,**<br>ನಿರ್ದೇಶಕರು (ಸಾರಿಗೆ),<br>ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ,<br>ಪರಿವಾಹನ್ ಭವನ್, ನಂ:1, ಸಂಸದ್ ಮಾರ್ಗ,<br>ಭಾರತ ಸರ್ಕಾರ, ನವದೆಹಲಿ–110001. | ನಿರ್ದೇಶಕರು<br>(ಅಧಿಕಾರಿಯುತ)<br>**(ಕೇಂದ್ರ ಸರ್ಕಾರದ ಪ್ರತಿನಿಧಿ)** |
| 11 | **ಶ್ರೀ ಪಿ. ರುದ್ರೇಶ್,**<br>ಮಂಡಳಿ ನಿರ್ದೇಶಕರು, ಕರಾರಸಾನಿಗಮ.,<br>ಶ್ರೀ ವೀರಭದ್ರೇಶ್ವರ ನಿಲಯ,<br>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎದುರು,<br>3ನೇ ಕ್ರಾಸ್, ವೆಂಕಟೇಶ ನಗರ,<br>ಶಿವಮೊಗ್ಗ ಜಿಲ್ಲೆ – 577 201. | ನಿರ್ದೇಶಕರು<br>(ಅಧಿಕಾರೇತರ) |
| 12 | **ಶ್ರೀ ರಾಜು ವಿಠಲಸಾ ಜರತಾರಘರ,**<br>ಮಂಡಳಿ ನಿರ್ದೇಶಕರು, ಕರಾರಸಾನಿಗಮ.<br>ದಿವಣಿ ಓಣಿ, ಸಿದ್ದವೀರಪ್ಪನ ಪೇಟ್,<br>ಕಮರಿಪೇಟ್ ಪೊಲೀಸ್ ಠಾಣೆ ಹತ್ತಿರ, | ನಿರ್ದೇಶಕರು<br>(ಅಧಿಕಾರೇತರ) |

| | | |
|---|---|---|
| | ಹುಬ್ಬಳ್ಳಿ, ಧಾರವಾಡ ಜಿಲ್ಲೆ – 580 028 | |
| 13 | **ಶ್ರೀ ಆರುಂಡಿ ನಾಗರಾಜ,**<br>ಮಂಡಳಿ ನಿರ್ದೇಶಕರು, ಕರಾರಸಾನಿಗಮ.<br>ನಂ – 180, ಗಣೇಶ ದೇವಸ್ಥಾನ ಹಿಂಭಾಗ,<br>ಹಳೆ ಬಸ್ ನಿಲ್ದಾಣ ಹತ್ತಿರ, ವಾರ್ಡ್ ನಂ. 17,<br>ಹೊಸಪೇಟೆ ರಸ್ತೆ, ಬಳ್ಳಾರಿ ಜಿಲ್ಲೆ. | ನಿರ್ದೇಶಕರು<br>(ಅಧಿಕಾರೇತರ) |
| 14 | **ಶ್ರೀ ವಿರೇಂದ್ರ ಶೆಟ್ಟರ,**<br>ಮಂಡಳಿ ನಿರ್ದೇಶಕರು, ಕರಾರಸಾ ನಿಗಮ<br>ನೆಹರು ನಗರ, ಛತ್ರ ರಸ್ತೆ,<br>ಶೆಟ್ಟರ್ ಪ್ಲಾಟ್ಸ್, ಬ್ಯಾಡಗಿ ತಾಲ್ಲೂಕು,<br>ಹಾವೇರಿ ಜಿಲ್ಲೆ. | ನಿರ್ದೇಶಕರು<br>(ಅಧಿಕಾರೇತರ) |
| 01 | **ಶ್ರೀ ಗಿರೀಶ್ ಸಿ. ಹೊಸುರ, ಭಾಆಸೇ.,**<br>ಮಹಾನಗರ ಆಯುಕ್ತರು,<br>ಬಿ ಎಂ ಆರ್ ಡಿ ಎ, ಕರ್ನಾಟಕ ಸರ್ಕಾರ,<br>ನಂ:1, ಆಲಿ ಅಸ್ಕರ್ ರಸ್ತೆ,<br>ಬೆಂಗಳೂರು 560001. | ಆಹ್ವಾನಿತರು<br>(ಅಧಿಕಾರಿಯುತ) |

***